ಕರ್ನಾಟಕ ಸರ್ಕಾರ

# ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
# ವನ್ಯಜೀವಿ ವಿಭಾಗ, ಶಿವಮೊಗ್ಗ.

**ಡಿ.ಸಿ ಕಾಂಪೌಂಡ್, ಸರ್ಕಾರಿ ನೌಕರರ ಭವನ ಹತ್ತಿರ, ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ**

ಕ್ರ:ಸಂ:ಎ4:ಅಮೊ:ವಾಹನ:ಹರಾಜು:ವಿವ:01/2019-20. ದಿ: 18-07-2019.

## -:: ಇ-ಸೇಲ್ ಪ್ರಕಟಣೆ ::-

**ಶಿವಮೊಗ್ಗ ವನ್ಯಜೀವಿ ವಿಭಾಗದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ 09 ವಾಹನಗಳು ಮತ್ತು 01 ಎತ್ತಿನಗಾಡಿ ಇ-ಸೇಲ್ ಮೂಲಕ ವಿಲೇ ಮಾಡುವ ಬಗ್ಗೆ.**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಶಿವಮೊಗ್ಗ ವನ್ಯಜೀವಿ ವಿಭಾಗದಲ್ಲಿ ಅರಣ್ಯ ಉತ್ಪನ್ನಗಳನ್ನು ಅಕ್ರಮವಾಗಿ ಸಾಗಿಸುತ್ತಿರುವಾಗ ಇಲಾಖಾ ಪರ ಜಪ್ತುಪಡಿಸಿಕೊಂಡ ವಿವಿಧ ಮಾದರಿಯ 09 ವಾಹನಗಳು ಮತ್ತು 1 ಎತ್ತಿನ ಗಾಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು, ಅವುಗಳನ್ನು ಇ-ಸೇಲ್ ಮೂಲಕ ವಿಲೇ ಮಾಡಲಾಗುವುದು. **(ಈಥರ್, ಟಾಟಾ ಇಂಡಿಕಾ ಕಾರು, ನೀಲಿ ಬಣ್ಣದ ಟಾಟಾ 407 ಲಾರಿ, 2 ಬಿಳಿ ಬಣ್ಣದ ಓಮಿನಿ, ಯಮಹ ಕ್ರುಕ್ಸ್ ಬೈಕ್, ಬಿಳಿ ಬಣ್ಣದ ಮಾರುತಿ ಓಮಿನಿ, ಬಿಳಿ ಬಣ್ಣದ ಟಾಟಾ ಮೋಟಾರ್ ಟ್ರಕ್ಸ್, ಬಿಳಿ ಬಣ್ಣದ ಅಂಬಾಸಿಡರ್ ಕಾರು ಮತ್ತು ಎತ್ತಿನ ಗಾಡಿ)** ಈ ಬಗ್ಗೆ ಮಾಹಿತಿಯನ್ನು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಪಡೆಯಬಹುದು. ಇಷ್ಟವುಳ್ಳ ಬಿಡ್‌ದಾರರು ಈ-ಸೇಲ್‌ನ್ನು www.eproc.Karnataka.gov.in.ರ ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ನೋಡಬಹುದು. (ಸದರಿ ವಾಹನಗಳನ್ನು ವಲಯದ ಹಣಗೆರೆ ಮತ್ತು ಸಕ್ರೆಬೈಲು ಕಛೇರಿಯ ಆವರಣದಲ್ಲಿ ಇಡಲಾಗಿದೆ.

ಇಷ್ಟವುಳ್ಳ ಬಿಡ್ಡುದಾರರು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಭಾಗವಹಿಸಲು ನೊಂದಣಿ ಮಾಡಿಸಿಕೊಂಡು ಭಾಗವಹಿಸಬೇಕಾಗುತ್ತದೆ. ಕೊನೆಯ ದಿನಾಂಕ: 02.08.2019 ರಂದು ಸಂಜೆ 4.30 ರ ವರೆಗೆ ಇ.ಎಂ.ಡಿ. ಹಣ ಕಟ್ಟಲು ಮತ್ತು ಭಾಗವಹಿಸಲು ಅಂತಿಮ ಸಮಯವಾಗಿರುತ್ತದೆ. ದಿ: 05.08.2019 ರಂದು ಬೆಳಿಗ್ಗೆ 10.00 ಗಂಟೆಗೆ ಇ-ಸೇಲ್ ಪ್ರಾರಂಭವಾಗುತ್ತದೆ.

ಹೆಚ್ಚಿನ ವಿವರಗಳು ಬೇಕಾದಲ್ಲಿ ಇ-ಪ್ರಕ್ಯೂರ್‌ಮೆಂಟ್ ಸೇಲ್ ನಂಬರ್ (080-25501216. 080-22501227)ನ್ನು ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಶಿವಮೊಗ್ಗ ವನ್ಯಜೀವಿ ವಿಭಾಗ, ಶಿವಮೊಗ್ಗ ಇವರ (08182-222983) ಕಛೇರಿ ವೇಳೆ ಸಂಪರ್ಕಿಸಬಹುದು.

**(ಎಸ್. ಜಿ. ಚಂದ್ರಶೇಖರ್, S.F.S)**
**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ವನ್ಯಜೀವಿ ವಿಭಾಗ, ಶಿವಮೊಗ್ಗ.**



Scanned by CamScanner